ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Tuesday, 10th February 1976, Magha 21, 1897 Sr.

The House met in the Assembly Chamber, Vidhana Soudha, at One of the clock.

[MADAM SPEAKER (SMT. K. S. NAGARATNAMMA) in the Chair]

STARRED QUESTIONS
(to which Oral Answers were given)

ಶಾಂತಿಗ್ರಾಮ ಹೋಬಳಿಯ ಮೊನಚಿ ದೊಡ್ಡ ಕೆರೆಯನ್ನು ದುರಸ್ತಿಗೊಳಿಸುವುದು.

*೮೪. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ)—ಸಣ್ಣ ನೀರಾವರಿ ರಾಜ್ಯಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಹಾಸನ ತಾಲ್ಲೂಕಿನ ಶಾಂತಿಗ್ರಾಮದ ಹೋಬಳಿ. ಮೊನಚಿ ದೊಡ್ಡಕೆರೆಯ ರಿಪೇರಿ ಕಾಮಗಾರಿಯ ಅಂದಾಜು ಮೊಬಲಗೆಷ್ಟು ;

(ಆ) ಯಾವ ದಿನಾಂಕದಂದು ಈ ಕೆಲಸ ಪ್ರಾರಂಭವಾಯಿತು ;

(ಇ) ಈ ಕೆಲಸವನ್ನು ಎಷ್ಟು ಕಾಲಾವಧಿಯಲ್ಲಿ ಮುಗಿಸಲು ಯೋಚಿಸಲಾಗಿತ್ತು ;

(ಈ) ಈ ಕಾಮಗಾರಿ ಕೆಲಸವು ಈಗ ಯಾವ ಹಂತದಲ್ಲಿದೆ ?

ಶ್ರೀ ಎಸ್. ಬಿ. ನಾಗರಾಳ್ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು—

(ಅ) ರೂ. ೧,೭೯,೦೦೦ ಅಂದಾಜು ಮೊಬಲಗು.

(ಆ) ೨೭-೩-೧೯೭೫.

(ಇ) ಜೆಂಡರು ಕರಾರಿನಂತೆ ಕೆಲಸ ಪ್ರಾರಂಭವಾದರಾಗಾಯ್ತು ಮಳೆಗಾಲದ ದಿನಗಳನ್ನು ಬಿಟ್ಟು ೬ ತಿಂಗಳುಗಳಲ್ಲಿ ಪೂರ್ತಿಸಬೇಕಾಗಿರುತ್ತದೆ.

(ಈ) ಎರಡು ತೂಬುಗಳನ್ನು ಪುನರ್‌ನಿರ್ಮಾಣ ಮಾಡಲಾಗಿದೆ, ಏರಿಯ ಮುಂಭಾಗದ ಕಲ್ಲು ಕಟ್ಟಡಕ್ಕೆ ಪಾಯ ತೆಗೆಯಲಾಗಿದೆ.

ಶ್ರೀ ಕೆ. ಹೆಚ್. ಹನುಮೇಗೌಡ : ಸ್ಯಾಮಿ, ಜೆಂಡರ್ ಕರಾರಿನಂತೆ 6 ತಿಂಗಳೊಳಗೆ ಈ ಕಾಮಗಾರಿಯನ್ನು ಮುಗಿಸಬೇಕೆಂದು ಹೇಳಿದ್ದೀರಿ. 1975ನೇ ಇಸವಿಯ ಪೂರ್ತಿನಲ್ಲಿ ಇದು ಶುರುವಾಗಿದೆ. ಇಷ್ಟು ಹೊತ್ತಿಗೆ ಮುಗಿದಿರಬೇಕು. ಎಷ್ಟು ಪ್ರೋಗ್ರೆಸ್‌ಆಗಿದೆಯೆಂಬುದನ್ನು ತಿಳಿಸುತ್ತೀರಾ ?

† ಶ್ರೀ ಎಸ್. ಬಿ. ನಾಗರಾಳ್:—ಕಂಟ್ರಾಕ್ಟಗೆ ಕೊಟ್ಟು 6 ತಿಂಗಳೊಳಗಾಗಿ ಮುಗಿಸ ಬೇಕೆನ್ನುವ ಕಂಡಿಷನ್ ಮೇಲೆ ಕೊಟ್ಟಿದ್ದೇವೆ. ಮಳೆಗಾಲವನ್ನು ಬಿಟ್ಟು 6 ತಿಂಗಳೊಳಗೆ ಪೂರೈಸಬೇಕಾಗಿರುತ್ತದೆ. ಈಗಾಗಲೇ 8 ಸಾವಿರ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಕಂಟ್ರಾಕ್ಟರ್ 6 ತಿಂಗಳೊಳಗೆ ಕೆಲಸ ಮಾಡಿದರೂ ಪೇಮೆಂಟ್ ಮಾಡಿ ಮುಗಿಸುವುದಕ್ಕೆ ಆಗುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ :—ಈ ಕಂಟ್ರಾಕ್ಟ ಶುರುಗಾಗಿ ಒಂದು ತಿಂಗಳೊಳಗಾಗಿ 6-7 ಸಾವಿರ ರೂಪಾಯಿನ ಕೆಲಸಮಾಡಿ ಕಂಟ್ರಾಕ್ಟರ್ ಕೆಲಸ ನಿಲ್ಲಿಸಿದ್ದಾನೆ, ಆ ಕಂಟ್ರಾಕ್ಟರ, ಕೆಲಸ ನಿಲ್ಲಿಸಬೇಕಾದರೆ ಕಾರಣ ಏನು ?

ಶ್ರೀ ಎಸ್. ಬಿ. ನಾಗರಾಳ್ :—ಇದಕ್ಕೆ ಕಾರಣ ಏನೆಂಬುದನ್ನು ನನಗೆ ಕೊಟ್ಟಿಲ್ಲ. 6 ತಿಂಗಳು ಟೈಮ್ ಇದೆಯೆಂಬ ದುಷ್ಟಿಯಿಂದ ನಿಲ್ಲಿಸಬೇಕು. ಕಂಟ್ರಾಕ್ಟರ ಕೆಲಸವನ್ನು ಪೂರ್ತಿಯಾಗಿ ಮಾಡದೇ ಹೋದರೆ ಅವನ ಮೇಲೆ ಕ್ರಮ ತೆಗೆದುಕೊಂಡು ಮುಂದಿನ ಕಾರ್ಯಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ :—ಪ್ರತಿ ತಿಂಗಳು ಇಷ್ಟಿಷ್ಟೇ ಪ್ರೋಗ್ರೆಸ್ ಕೊಡಬೇಕೆಂಬ ನಿಯಮ ಇದೆಯೆಂದು ತಿಳಿದುಕೊಂಡಿದ್ದೇನೆ. ಈ ರೀತಿಯ ನಿಯಮ ಈ ಕಂಟ್ರಾಕ್ಟರ್‌ಗೆ ಅನ್ವಯಿಸುವುದಿಲ್ಲವೇ ? ಈ ಕೆಲಸವನ್ನು ಶುರುಮಾಡಿ 8-10 ತಿಂಗಳು ಆದರೂ ಕೂಡ ಸರ್ಕಾರ ಏತಕ್ಕೆ ಸುಮ್ಮನೆ ಇದೆ ?

ಶ್ರೀ ಎಸ್. ಬಿ. ನಾಗರಾಳ್ :—ಇದರ ಬಗ್ಗೆ ಅವನಿಗೆ ನೋಟಿಸ್ ಕೊಟ್ಟಿದ್ದೇನೆ. ಇದರ ಬಗ್ಗೆ ವಿಶೇಷವಾದ ಗಮನ ವಹಿಸಿ ಬೇಗ ಮುಗಿಸುವ ದೃಷ್ಟಿಯಿಂದ ಹಾಗೆ ಮಾಡಿದ್ದೇನೆ.

ಶ್ರೀ ಕೆ. ಹೆಚ್. ಹನುಮೇಗೌಡ :—ಈ ಕಂಟ್ರಾಕ್ಟರ್ ಯಾವುದೋ ಬೇರೆ ಕೆಲಸ ಮಾಡಿ ದುದ್ದನ್ನು ಕೊಡಬೇಕಾಗಿದ್ದು, ಈ ದುದ್ದನ್ನು ಇದರಲ್ಲೆ ಹಿಡಿದುಕೊಳ್ಳಬೇಕೆಂದು ಸರ್ಕಾರಕ್ಕೆ ನೋಟಿಸ್ ಕೊಟ್ಟು ಆಮೇಲೆ ನಿಲ್ಲಿಸಿದ್ದಾನೆಂದು ತಿಳಿದು ಬಂದಿದೆ. ಈ ಕೆಲಸ ಈ ಕಾರಣಕ್ಕಾಗಿಯೇ ನಿಂತಿದ್ದರೆ ಅವನಿಗೆ ರಿಯಾಯಿತಿ ಕೊಟ್ಟು ಕೆಲಸವನ್ನು ಮಾಡಿಸಿ. ಅಕಸ್ಮಾತ್ ಇದು ಸಾಧ್ಯವಿಲ್ಲ ವಾದರೆ ಈ ಕಂಟ್ರಾಕ್ಟನ್ನು ಕ್ಯಾನ್ಸೆಲ್ ಮಾಡಿ ಬೇರೆಯವರಿಗೆ ಕೊಟ್ಟು ಕೆಲಸ ಮಾಡಿಸಿ. ಪ್ರತಿವರ್ಷ ಷೆಡ್ಯೂಲ್ಡ್ ರೇಟ್ ರಿಮೈಸ್ ಆಗುತ್ತಿರುತ್ತದೆ. ಇದರಿಂದ ತೊಂದರೆಯಾಗುತ್ತದೆ. ಆದ್ದರಿಂದ ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಈ ಕಂಟ್ರಾಕ್ಟರ್‌ಗೆ ರಿಯಾಯಿತಿ ಕೊಟ್ಟು ಕೆಲಸ ಮಾಡಿಸುತ್ತೀರಾ ಅಥವಾ ಈ ಕಂಟ್ರಾಕ್ಟನ್ನು ಕ್ಯಾನ್ಸಲ್ ಮಾಡಿ ಬೇರೆಯವರಿಗೆ ಕೊಟ್ಟು ತಕ್ಷಣ ಕೆಲಸ ಮಾಡಿಸುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್ :—ರೀಫಂಡ್ ಮಾಡಿಕೊಳ್ಳುತ್ತಾನೆಂದು ನನ್ನ ನಜರಿಗೆ ಬಂದಿಲ್ಲ. ಈಗಾಗಲೇ ನೋಟೀಸ್ ಕೊಟ್ಟಿದ್ದೇನೆ. ಮುಂದೆ ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಿಲ್ಲವೆಂದರೆ ಪಿ. ಡಬ್ಲ್ಯೂ. ಡಿ. ಕಾನೂನು ಪ್ರಕಾರ ನೋಟೀಸ್ ಕೊಟ್ಟು ಸರಿಯಾದ ಕ್ರಮವನ್ನು ಕೈಕೊಳ್ಳುತ್ತೇವೆ.

Construction and Repairs of Roads in Belgaum Taluk

(106) Sri P. A. Pawashe (Uchagaon)—Will the Minister for public Works be pleased to state :—

(*a*) the number of roads taken up for construction and repairs under Special Employment and Rural Communication Programmes in Belgaum Taluk ;

(*b*) the amount spent on each of these roads ;

---

†Asterisks indicate that remarks or speeches have not been revised by the member concerned.